ಬಂದಾಗ ಸಮಿತಿಯ ಸದಸ್ಯರಾಗಿ ಭಾಗವಹಿಸದೇ ಇರತಕ್ಕ ಪರಿಸ್ಥಿತಿ ಬರಬಹುದು. ತಾವು ಅವಕಾಶ ಕೊಡದೇ ಹೋದರೆ 233 ರ ಪ್ರಕಾರ ಭಾಗವಹಿಸತಕ್ಕ ಹಕ್ಕು ಪ್ರಾಪ್ತವಾಗುತ್ತದೆ. ಇಂತಹ ಒಂದು ಪರಿಸ್ಥಿತಿ ಬರಬಹುದು ಎಂದು ಹೇಳುತ್ತಾ ಇದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ರೂಲಿಂಗ್ ಕೊಡಿ.

RULING BY THE CHAIR

MR. SPEAKER.—Decisions in the Committees are taken by the majority of the members present and the members are not compelled to be present. It is the discretion of the members. I do understand in the present case that there was a difficulty and the Hon'ble Member wanted to take the powers under Rule 346 and permit him to present his own opinion on this Committee report but unfortunately, my reading of Rule 346 is, in the absence of any specific rules provided for, only we can invoke Rule 346 ; but there is a specific provision *i.e.*, Rule 231 which categorically says about the report of the Committee. Therefore, there shall be one report and there shall not be any discussion on the report unless otherwise under Rule 233 if discussion is allowed. Therefore, now the report is presented by the Chairman and I don't think under the rules that a member in the Committee can express his opinion at this stage in the House and therefore, I close the discussion and I shall not allow the member to present his own opinion at this stage.

Now Calling Attention. Dr. V. S. Acharya to call the Attention of the Hon'ble Minister of State for Health.

DR. V. S. ACHARYA .—Sir, I call the Attention of the Hon'ble Minister of State for Health regarding.....

SRI M. VEERAPPA MOILY.— Sir, I have given a notice under Rule 334.....

MR. SPEAKER.— I have already called Dr. Acharya. We have already passed that stage. The Hon'ble Member has already called the attention of the Minister for Health.

SRI. M. VEERAPPA MOILY.— Sir, I have given notice under Rule 334.....

MR. SPEAKER.— I cannot go back now.

SRI M. VEERAPPA MOILY.— It is not a question of going back. ಡಾ॥ ವಿ. ಎಸ್. ಆಚಾರ್ಯ.—ಅಧ್ಯಕ್ಷರೇ. ಎಂ.ಬಿ.ಬಿ.ಎಸ್. ಮಾಡಿ ಕೊನೆಯಲ್ಲಿ ಅವರು ಒಂದು ವರ್ಷ ಹೌಸ್ ಸರ್ಜನ್-ಶಿಪ್ಪನ್ನು ಮಾಡಬೇಕಾಗಿರುತ್ತದೆ. ಆ ಅವಧಿಯಲ್ಲಿ ಅವರು ತಮ್ಮ ಸೇವೆಯನ್ನು ಸಲ್ಲಿಸುವಾಗ.....

MR. SPEAKER .—I have already gone to the next subject. The Hon'ble Member Dr. Acharya has already called the attention of the Hon'ble Minister for Health.

ಶ್ರೀ ಎಂ ವಿರಪ್ಪ ಮೊಯಿಲಿ.—10-40 ಕ್ಕೆ ತಮಗೆ ನಾನು ನೋಟೀಸ್ ಕಳುಹಿಸಿದ್ದೇನೆ. This is very important subject. It is a question of under-trials coming

out of the Central Jail and going to Kalasipalyam and threatening some of the drivers and conductors.

MR. SPEAKER .—Just now I have sent the notice to the Government.

SRI M. VEERAPPA MOILY.—It is a question of under-trials who are charged with murder cases and who are not released on bail are coming out of the Central Jail and creating problems in Kalasipalyam... If accused in murder cases are coming out of Jail, then where is the safety for the public ?

ಡಾ॥ ವಿ. ಎಸ್. ಆಚಾರ್ಯ.—ಕಿರಿಯ ಡಾಕ್ಟರ್‌ಗಳಾಗಿ ಸೇವೆ ಸಲ್ಲಿಸುತ್ತಿರುವವರಿಗೆ ಅವರ ಜೀವನ ನಿರ್ವಹಣೆಗಾಗಿ 440 ರೂಪಾಯಿಗಳನ್ನು ಕೊಡತಕ್ಕದ್ದು ತುಂಬಾ ಅಗತ್ಯವಿದೆ, ಇದಕ್ಕಾಗಿ ಮಾನ್ಯ ಸಚಿವರ ಗಮನವನ್ನು ಸೆಳೆಯುಬಯಸುತ್ತೇನೆ.

MR. SPEAKER.— You cannot make a statement. This is a new method of calling the attention of the Hon. Minister.

Sri P. G. R. Sindhia (Hon. Minister. of State for Health).—ಅಧ್ಯಕ್ಷರೇ.....

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರು ಉತ್ತರ ಓದುತ್ತಿದ್ದಾರೆ ನಮಗೆ ಕಾಫಿಯನ್ನೇ ಕೊಟ್ಟಿಲ್ಲ...

MR. SPEAKER.— ಮಾನ್ಯ ಸಚಿವರು ಓದುವುದಕ್ಕೆ ಪ್ರಾರಂಭ ಮಾಡಿದ ಮೇಲೆಯೇ ಕೊಡುವುದು Members should have little patience.

ಗಮನಸೆಳೆಯುವ ಸೂಚನೆ

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೇ, ತಮ್ಮ ಅನುಮತಿ ಪಡೆದು ಈ ಹೇಳಿಕೆಯನ್ನು ಓದ ಬಯಸುತ್ತೇನೆ.

ಮಂಗಳೂರು, ಬೆಳಗಾವಿ ಹಾಗೂ ದಾವಣಗೆರೆಗಳಲ್ಲಿರುವ ಖಾಸಗಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಹೌಸ್ ಸರ್ಜನ್‌ಗಳು ಮುಷ್ಕರ ಹೂಡಿದ್ದಾರೆ. ಈ ವಿಷಯವು ಸರ್ಕಾರಕ್ಕೆ ಈಗಾಗಲೇ ತಿಳಿದಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಜೋಡಿಸಲ್ಪಟ್ಟ ಶೈಕ್ಷಣಿಕ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ಹೌಸ್ ಸರ್ಜನ್‌ಗಳಿಗೆ ಪೆಟ್. ಆರ್. ಎ. 40ರೂ ಸೇರಿಸಿ, ಪ್ರತಿ ತಿಂಗಳೂ 440 ರೂ. ಸ್ಟೈಪೆಂಡ್ ಕೊಡಲಾಗುತ್ತಿದೆ. ಇಂತಹ ಕೊಡುಗೆಯನ್ನು ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಜೋಡಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದ ಹೌಸ್ ಸರ್ಜನ್‌ಗಳಿಗೂ, ಈವರೆಗೆ ಸಂಬಂಧಪಟ್ಟ ಖಾಸಗಿ ಕಾಲೇಜಿನವರು ಕೊಡುತ್ತಿದ್ದರು. ಆದರೆ ಇತ್ತೀಚೆಗೆ ಅಂದರೆ 1978–79 ನೇ ಸಾಲಿನಲ್ಲಿ ಮತ್ತು ಅದರಿಂದೀಚೆಗೆ ಎಂ. ಬಿ. ಬಿ. ಎಸ್. ಗೆ ಸೇರಿದ ವಿದ್ಯಾರ್ಥಿಗಳಿಗೆ ಕೊಡುವುದನ್ನು ಅವರು ನಿಲ್ಲಿಸಿದ್ದಾರೆ. ಉಲ್ಲೇಖಿತ ವಿದ್ಯಾರ್ಥಿಗಳು ಈಗ ಹೌಸ್ ಸರ್ಜನ್ ಆಗಿದ್ದಾರೆ. ಮತ್ತು ಅವರೇ, ಸ್ಟೈಪೆಂಡ್ ಕೊಡುವುದನ್ನು ನಿಲ್ಲಿಸಿದರ ವಿರೋಧವಾಗಿ ಈಗ ಮುಷ್ಕರ ಹೂಡಿದ್ದಾರೆ.

ಸರದಿ ಪ್ರಕಾರ ಕಡ್ಡಾಯವಾಗಿರುವ ಹೌಸ್‌ಮೆನ್‌ಷಿಪ್ ವಿಷಯದಲ್ಲಿ ಸರ್ಕಾರದ ನಿಲುವನ್ನು ಆಜ್ಞೆ ನಂ. ಹೆಚ್.ಎಫ್.ಡಬ್ಲ್ಯೂ 34 ಎಂ.ಎಂ.ಇ. 78 ತಾರೀಖು 15–9–78 ಇದರಲ್ಲಿ ಮೊದಲೇ ಸ್ಪಷ್ಟ ಪಡಿಸಲಾಗಿದೆ. ಆದರ ಪ್ರಕಾರ ಕಡ್ಡಾಯವಾಗಿರುವ ಸರದಿಯ ಇಂಟರ್ನ್‌ಷಿಪ್ ಎಂ.ಬಿ.ಬಿ.ಎಸ್. ಕೋರ್ಸ್‌ನ ಒಂದು ಅವಿಭಾಜ್ಯ ಅಂಗವಾಗಿದೆ. ಆದ್ದರಿಂದ ಸರ್ಕಾರವು ಈ ವಿಷಯದಲ್ಲಿ ಸ್ಟೈಪೆಂಡ್ ಕೊಡುವುದರ ಸಲುವಾಗಿ ತನ್ನ ದೇಣಿಗೆಯನ್ನು ಕೊಡುವುದಿಲ್ಲ ಎಂಬುದೇ ಮೇಲೆ ಉಲ್ಲೇಖಿಸಿದ ಸರ್ಕಾರದ ನಿಲುವು. ವಿಷಯವು ಹೀಗೆ ಸ್ಪಷ್ಟವಿರುವಾಗ ಶೇಕಡ 50 ಖರ್ಚನ್ನು ನೋಡಿಕೊಳ್ಳುವುದನ್ನು ನಿಲ್ಲಿಸಿದ ಸರ್ಕಾರದ ನಿರ್ಧಾರವು ಯೋಗ್ಯವಾಗಿದೆ.

ಆದಾಗ್ಯೂ 15–9–78ರ ಮೇಲೆ ಉಲ್ಲೇಖಿಸಿದ ಆಜ್ಞೆಯಲ್ಲಿ ಸರ್ಕಾರವು ಖಾಸಗಿ ಕಾಲೇಜುಗಳಿಗೆ ಯೋಗ್ಯ ತೋರಿದಷ್ಟು ಸ್ಟೈಪೆಂಡ್‌ನ್ನು ಕೊಡಲು ಅನುಮತಿ ಕೊಟ್ಟಿತ್ತು. ಆದರೆ ಖಾಸಗಿ ಕಾಲೇಜಿನವರು ಅದರಲ್ಲೂ ಬೆಳಗಾವಿ, ದಾವಣಗೆರೆ ಹಾಗೂ ಕೆ. ಎಂ. ಸಿ. ಮಂಗಳೂರುಗಳಲ್ಲಿರುವ ಖಾಸಗಿ ವೈದ್ಯಕೀಯ ಕಾಲೇಜುಗಳು ಈ ಸ್ಟೈಪೆಂಡನ್ನು 1978–79 ಹಾಗೂ ತದನಂತರ ಎಂ. ಬಿ. ಬಿ. ಎಸ್.ಗೆ ಸೇರಿಕೊಂಡ ವಿದ್ಯಾರ್ಥಿಗಳಿಗೆ ಕೊಡುವುದನ್ನು ನಿಲ್ಲಿಸಿಬಿಟ್ಟರು. ಈ ಎರಡು ಖಾಸಗಿ ಕಾಲೇಜುಗಳು ತೆಗೆದುಕೊಂಡ ಉಲ್ಲೇಖಿತ ನಿರ್ಧಾರದ ವಿರುದ್ಧವಾಗಿ ಗೊಂದಲಮಯ ವಾತಾವರಣ ಉಂಟಾಗಿದೆ. ಇದರಲ್ಲಿ ಈ ವಾತಾವರಣಕ್ಕೂ ಸರ್ಕಾರದ ನಿರ್ಧಾರಗಳಿಗೂ ಪ್ರತ್ಯಕ್ಷ ಸಂಬಂಧವಿಲ್ಲವಾದರೂ, ಇದರ ಬಗ್ಗೆ ಸರ್ಕಾರ ಸುಮ್ಮನೆ ಕುಳಿತಿಲ್ಲ.

ಮುಷ್ಕರ ಹೂಡಿದ ವಿದ್ಯಾರ್ಥಿಗಳಿಂದ ಅರ್ಜಿಗಳು ಸರ್ಕಾರಕ್ಕೆ ಬಂದಿವೆ. ಅವರ ಬೇಡಿಕೆಯನ್ನು ಅದು ಮುಕ್ತ ಮನಸ್ಸಿನಿಂದ ಪರಿಶೀಲಿಸುತ್ತಿದೆ. ಸರ್ಕಾರೀ ವೈದ್ಯಕೀಯ ಕಾಲೇಜುಗಳಿಗೆ ಜೋಡಿಸಲ್ಪಟ್ಟ